ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರ:1221/2016

ಚಾಸಾ:4 ಪ್ರಾಸಾ:3

ದಿನಾಂಕ: 03.05.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ರಾಘವೇಂದ್ರ ನಾಯ್ಕ |
| ತಂದೆಯ ಹೆಸರು | : | ಬಸವ ನಾಯ್ಕ |
| ವಯಸ್ಸು | : | 44 ವರ್ಷ |
| ಉದ್ಯೋಗ | : | ಹೊಟೇಲ್ ನಲ್ಲಿ ಕೆಲಸ |
| ವಾಸ ಸ್ಥಳ | : | ಜಪ್ತಿ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ದಿ: 19-11-2015 ರಂದು ನಾನು ದಬ್ಬೆಕಟ್ಟೆಯಿಂದ ತೆಕ್ಕಟ್ಟೆ ಕಡೆಗೆ ಹೋಗುತ್ತಿದ್ದಾಗ ತೆಂಕುಬೆಟ್ಟು ಸಮೀಪ ಒಂದು ಅಟೋ ಸಂಖ್ಯೆ ಕೆಎ-20-ಸಿ-3375 ನಿಂತಿದ್ದು, ಬೆಳಿಗ್ಗೆ 10-30ರ ಸಮಯದಲ್ಲಿ ಒಬ್ಬ ವ್ಯಕ್ತಿ ರಮೇಶ್ ಎಂಬುವರನ್ನು ಸಮವಸ್ತ್ರದಲ್ಲಿ ಇದ್ದ ಕೋಟ ಪೊಲೀಸರಾದ ಚಾಸಾ-1 ಮತ್ತು 2 ರವರು ಹಿಡಿದುಕೊಂಡಿದ್ದು, ಆಗ ಅವರಿಂದ ತಪ್ಪಿಸಿಕೊಳ್ಳಲು ನೆಲದ ಮೇಲೆ ಉರುಳಾಡಿ ಪೊಲೀಸರ ಸಮವಸ್ತ್ರವನ್ನು ಹರಿದು ಹಾಕಿರುತ್ತಾರೆ. ಅದನ್ನು ನಾವು ತಪ್ಪಿಸಲು ಹೋದಾಗ 4 ಮತ್ತು 5ನೇ ಆರೋಪಿತರು ಸಮೀಪದಲ್ಲಿ ಇದ್ದ ಅವರ ಮನೆಯಿಂದ ಬಂದು ಪೊಲೀಸರ ಮೇಲೆ ದೊಣ್ಣೆಯಿಂದ ಹಲ್ಲೆ ಮಾಡಿ ಕಾಲಿನಿಂದ ಒದ್ದು 4ನೇ ಆರೋಪಿ 2ನೇ ಮತ್ತು 3ನೇ ಆರೋಪಿತರಿಗೆ ಕರೆ ಮಾಡಿ ಸ್ಥಳಕ್ಕೆ ಕರೆಯಿಸಿ ಪುನಃ ದೊಣ್ಣೆಯಿಂದ ಹಲ್ಲೆ ಮಾಡಿ ಅದನ್ನು ತಪ್ಪಿಸಲು ಹೋದ ನನ್ನ ಕೈಗೆ ಮತ್ತು ಸೊಂಟಕ್ಕೆ ಪೆಟ್ಟಾಗಿರುತ್ತದೆ. ನನಗೆ 2ನೇ ಆರೋಪಿ ಕೈಯಿಂದ ಕೆನ್ನೆಗೆ ಮತ್ತು ದೇಹಕ್ಕೆ ಹೊಡೆದು ತಳ್ಳಿರುತ್ತಾರೆ. ದೊಣ್ಣೆಯಿಂದ 4ನೇ ಆರೋಪಿ ಹೊಡೆದಿರುತ್ತಾರೆ. 1ನೇ ಆರೋಪಿಯನ್ನು ಬಿಡದೆ ಇದ್ದರೆ

ಪೊಲೀಸರಿಗೆ ಕೊಲೆ ಬೆದರಿಕೆ ಹಾಕಿ ಅಲ್ಲಿಂದ ತಪ್ಪಿಸಿಕೊಂಡು 1ನೇ ಆರೋಪಿಯೊಂದಿಗೆ ಪರಾರಿಯಾಗಿರುತ್ತಾರೆ.

ಅನಂತರ ಸ್ಥಳೀಯರಾದ ಅಣ್ಣಿ ಎಂಬುವರು ಚಾಸಾ-1, 2 ಮತ್ತು ನನ್ನನ್ನು ಕುಂದಾಪುರದ ಸರಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಸೇರಿಸಿರುತ್ತಾರೆ. ಸ್ಥಳದಲ್ಲಿ ಇದ್ದ ಅಟೋ ಇವರ ಗಲಾಟೆಯಲ್ಲಿ ಗ್ಲಾಸ್ ಒಡೆದು ಸ್ವಲ್ಪ ಜಖಂ ಆಗಿರುತ್ತದೆ. ಅದರಿಂದ ಚಾಸಾ-3 ರವರಿಗೆ ನಷ್ಟವಾಗಿರುತ್ತದೆ. ಇದರಿಂದ ಚಾಸಾ-1 ಮತ್ತು 2ರವರ ಸರಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾರೆ. ಈ ವಿಚಾರವಾಗಿ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

ಈ ದಿನ ನ್ಯಾಯಾಲಯದ ಮುಂದೆ ಇರುವ 1, 4 ಮತ್ತು 5 ನೇ ಆರೋಪಿತರು ಇರುತ್ತಾರೆ ಎಂದು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಉಳಿದ ಆರೋಪಿತರನ್ನು ನೋಡಿದ್ದಲ್ಲಿ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಮುಮಾ1 ರಿಂದ 3ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಅಟೋದ ಪೋಟೋ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಪಾಟೀ ಸವಾಲಿಗಾಗಿ ಕಾಲವಕಾಶ ಕೋರಿದ್ದು ರೂಪಾಯಿ 200/-ರ ದಂಡದೊಂದಿಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**